ಪಿ.ಡಬ್ಲ್ಯು–01

**ಸಾಕ್ಷಿಯನ್ನು ದಿನಾಂಕಃ 02.03.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀಸವಾಲುಃ ಆರೋಪಿಗಳ ಪರ ಶ್ರೀ ಕೆ.ವಿ.ಪಿ, ವಕೀಲರಿಂದಃ**

ಕರ್ತವ್ಯಕ್ಕೆ ಅಡ್ಡಿಪಡಿಸಿರುತ್ತಾರೆ ಎಂದು ಹೇಳಿದ ಸಮಯದಲ್ಲಿ ಆರೋಪಿಗಳನ್ನು ಹೊರತುಪಡಿಸಿ ಬೇರೆಯವರು ಕೂಡ ಇದ್ದರು. ವಿಷದ ಬಾಟಲಿ ಮೆಟಲ್ ಬಾಟಲಿಯಾಗಿದ್ದು, ಅದನ್ನು 1 ನೇ ಆರೋಪಿ ಕಿತ್ತುಕೊಂಡಿರುತ್ತಾರೆ. ವಿಷದ ಬಾಟಲಿಯನ್ನು ಆರೋಪಿಗಳೇ ಮಣ್ಣನ್ನು ಹಾಕಿ ನಾಶಪಡಿಸಿರುತ್ತಾರೆ. ಸದರಿ ವಿಷದ ಬಾಟಲಿಯನ್ನು ಅಮಾನತ್ ಪಡಿಸಿಕೊಂಡಿರುತ್ತೀರಾ ಎಂದರೆ ಅಲ್ಲಿ ಗಲಾಟೆಯಾಗಿದ್ದರಿಂದ ಅದನ್ನು ವಶಪಡಿಸಿಕೊಂಡಿರುವುದಿಲ್ಲ. ನಾನು ಹೇಳಿದಂತೆ ಅಲ್ಲಿ ಯಾವುದೇ ವಿಷದ ಬಾಟಲಿ ಇರಲಿಲ್ಲ ಮತ್ತು ಅದನ್ನು 1 ನೇ ಆರೋಪಿ ಕಿತ್ತುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಒಂದು ವೇಳೆ ಅಲ್ಲಿ ವಿಷಯ ಬಾಟಲಿ ಇದ್ದಿದ್ದರೆ ಶ್ವಾನದಳವನ್ನು ಕರೆಯಿಸಿ ಪರೀಕ್ಷೆ ಮಾಡಿಸುತ್ತಿದ್ದೆ ಎಂದರೆ ಅಲ್ಲಿ ವಿಷದ ಬಾಟಲಿ ಇತ್ತು. ನಾನು ಹೇಳಿದಂತೆ ಅಲ್ಲಿ ಯಾವುದೇ ವಿಷದ ಬಾಟಲಿಯಾಗಲಿ ಮತ್ತು ಅಲ್ಲಿ ಯಾವುದೇ ಗಲಾಟೆ ನಡೆಯದಿದ್ದರೂ ಆರೋಪಿಗಳ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಕೂಡಲೆ ದೂರು ಕೊಡಲು ಯಾವುದೇ ತೊಂದರೆ ಇಲ್ಲದಿದ್ದರೂ 15 ದಿವಸಗಳ ಕಾಲ ದೂರು ನೀಡಲು ತೊಂದರೆ ಇತ್ತು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ದಿನಾಂಕ 16.07.2016 ರಂದು ನಾನು ಪೊಲೀಸರಿಗೆ ಮರು ಹೇಳಿಕೆ ನೀಡಿರುತ್ತೇನೆ. ನಾನು ದಿನಾಂಕ 16.07.2016 ರಂದು ನಾನು ಸ್ಥಳಕ್ಕೆ ಹೋಗಿ ಯಾವುದೇ ಮಹಜರ್ ಮಾಡಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇರುವುದಿಲ್ಲ.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸಾ ಸ ಇ ಒ.,**

ಸಹಿ/-

**ಪ್ರಧಾನ ದಿವಾನಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ.,**

**ನಂಜನಗೂಡು.**